ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಈಚೆಗೆ ಹಣಕಾಸಿನ ಸಚಿವರು, ಪಬ್ಲಿಕ್‌ವರ್ಕ್ಸ್ ಸಚಿವರು, ಜಿಲ್ಲೆ ಶಾಸನ ಸಭಾ ಮತ್ತು ವಿಧಾನ ಪರಿಷತ್ತಿನ ಸದಸ್ಯರೂ ಮತ್ತು ಅಧಿಕಾರಿಗಳು ಸಭೆ ಸೇರಿದ್ದಾಗ ಐದು ಲಕ್ಷ ರೂಪಾಯಿ ಕೆಲಸವಿದ್ದರೆ ಅದನ್ನು ತೆಗೆದುಕೊಳ್ಳಬೇಡಿ ಎಂದು ಆದೇಶ ಕೊಟ್ಟಿದ್ದಾರೆ. ಅನೇಕ ತಾಲ್ಲೂಕುಗಳಲ್ಲಿ ಟಿಕ್ಕಿಕಲ್ ಡಿಫೆಕ್ಟ್ಸ್ ಮತ್ತು ಇತರ ಕೆಲವು ಕಾರಣಗಳಿಂದ ಸ್ಟಿಲ್ ಓವರ್ ವರ್ಕ್ಸ್‌ನಲ್ಲಿ ಸೇರಿರುತ್ತವೆ. ಅಲ್ಲದೆ ಒಂದೊಂದು ಕೆಲಸ ತಾಲ್ಲೂಕಿನ ಮೂಲೆಯಲ್ಲಿರುತ್ತದೆ. ಈಗ ಕ್ಷಾಮ ಪರಿಸ್ಥಿತಿ ಇರುವುದರಿಂದ ಅಲ್ಲಲ್ಲಿ ಹೆಚ್ಚು ಜನ ಕೂಲಿಗಾರರಿಗೆ ಅನುಕೂಲವಾಗುವಂತೆ ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಆದೇಶ ಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ನಾವು ಸೀಲಿಂಗ್ ಏನೂ ಇಟ್ಟಿಲ್ಲ. ಗೌರಿಬಿದನೂರು ತಾಲ್ಲೂಕಿನಲ್ಲಿ ಹೆಚ್ಚಿನ ಸ್ಟಿಲ್ ಓವರ್ ವರ್ಕ್ಸ್ ಇವೆ. ಇವತ್ತಿನ ಪರಿಸ್ಥಿತಿಯಲ್ಲಿ ಗೌರಿಬಿದನೂರು ತಾಲ್ಲೂಕಿನಲ್ಲಿ ಕ್ಷಾಮ ಪರಿಸ್ಥಿತಿ ಇದೆ ಎನ್ನುವುದು ಸರ್ಕಾರಕ್ಕೆ ಮನದಟ್ಟಾಗಿದೆ. ಅದಕ್ಕೋಸ್ಕರ ಅಲ್ಲಿ ಮಾಡಬೇಕಾದ ಅತ್ಯಾವಶ್ಯಕವಾದ ಮತ್ತು ಮುಖ್ಯವಾದ ಕೆಲಸಗಳ ಪಟ್ಟಿಯನ್ನು ಮಾಡಿಕೊಂಡಿದ್ದೇವೆ ; ಮತ್ತು ಅವುಗಳನ್ನು ತೆಗೆದುಕೊಳ್ಳಬೇಕೆಂದು ಹಣಕಾಸಿನ ಮಂತ್ರಿಗಳೂ ಮತ್ತು ಪಬ್ಲಿಕ್ ವರ್ಕ್ಸ್ ಮಂತ್ರಿಗಳೂ ಎಲ್ಲ ಸೇರಿ ತೀರ್ಮಾನ ಕೈಕೊಂಡಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಅನೇಕಸಾರಿ ಮತ್ತು ಹೊರಗಡೆ ಭರವಸೆಯನ್ನು ಹೇಳಿದರು. ಆಂಧ್ರಕ್ಕೆ ಜಯಮಂಗಲ ನದಿಯಿಂದ ನೀರು ಹರಿದುಹೋಗುತ್ತಿದೆ. ಇಲ್ಲಿ ಜಲಾಶಯವನ್ನು ಕಟ್ಟಬಾರದು ಎನ್ನುವ ಆತಂಕವನ್ನು ಆಂಧ್ರದವರು ವ್ಯಕ್ತಪಡಿಸಿದ್ದಾರೆ. ಈ ಜಲಾಶಯವನ್ನು ಕೊರಟಗೆರೆ ತಾಲ್ಲೂಕಿನಲ್ಲಿ ನಿರ್ಮಿಸಲು ಅಂದಾಜಾಗಿ ಬಹಳ ವರ್ಷಗಳಾಗಿವೆ. ಆ ಬಗ್ಗೆ ಈ ವರ್ಷದ ಬಜೆಟ್ಟಿನಲ್ಲಿ ಟೋಕನ್ ಗ್ರಾಂಟ್ ಕೊಟ್ಟು ಕೆಲಸವನ್ನು ಪ್ರಾರಂಭಮಾಡುವ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಜಯಮಂಗಲ ಜಲಾಶಯಕ್ಕೆ 15 ಲಕ್ಷ ರೂಪಾಯಿಗಳ ಅಂದಾಜು ತಯಾರಾಗಿದೆ. ದೊಡ್ಡ ಜಲಾಶಯವನ್ನು ಕಟ್ಟುವುದಕ್ಕೆ ಬದಲು ಮೂರು ನಾಲ್ಕು ಸಣ್ಣ ಕೆರೆಗಳನ್ನು ಕಟ್ಟುವುದು ಒಳ್ಳೆಯದು ಎನ್ನುವ ಅಭಿಪ್ರಾಯವಿದೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

Dispute under Industrial Disputes Act

*Q.—290. SRI A. J. DODDAMETI (Ron).—

Will the Government be pleased to state :—

(*a*) whether an award has been passed in the case No. 10/1964 by the Industrial Tribunal in the dispute under Industrial Disputes Act, in case of Thungabhadra Project Circle Workers *Vs* " Management of the Superintending Engineer, P.W.D., T.P. Circle, Munirabad " ;

(*b*) if so, whether the award has been implemented and on what date ;

(*c*) if not, why not ?

A.—SRI D. DEVARAJ URS (Minister for Transport and Tourism).—

(*a*) Yes.

(*b*) The award has not been implemented.

(*c*) It is ascertained that the Superintending Engineer, P.W.D., T.P. Circle, Munirabad, is awaiting the orders of the competent authority to implement the Award. The Chief Engineer, Irrigation Projects, Munirabad has been requested by Government to implement the Award.

ಶ್ರೀ ಎ. ಜೆ. ದೊಡ್ಡಮೇಟಿ.—ತೀರ್ಪುಕೊಟ್ಟ ದಿನಾಂಕ ಯಾವುದು ?

†ಶ್ರೀ ಡಿ. ದೇವರಾಜ್ ಅರಸ್.—ಅವಾರ್ಡ್ ಪ್ರಕಟವಾದ ತಾರೀಖು 10.7.1965.

ಶ್ರೀ ಎ. ಜೆ. ದೊಡ್ಡಮೇಟಿ.—ಈ ತೀರ್ಪಿನ ಪರಿಣಾಮಕ್ಕೆ ಒಳಪಡುವ ಕೆಲಸಗಾರರ ಸಂಖ್ಯೆ ಎಷ್ಟು ?

ಶ್ರೀ ಡಿ. ದೇವರಾಜ್ ಅರಸ್.—ಈಗ ಎಷ್ಟು ಜನ ಅಲ್ಲಿ ಕೆಲಸ ಮಾಡುತ್ತಾರೆಯೋ ಅವರಿಗೆಲ್ಲ ಅನ್ವಯ ವಾಗುತ್ತದೆ. ಒಂದು ನೆಕ್ಷನ್ನಿಗೆ ಮಾತ್ರ ಸಂಬಂಧಪಟ್ಟದ್ದಲ್ಲ, ಎಲ್ಲರಿಗೂ ಅನ್ವಯಿಸುತ್ತದೆ.

ಶ್ರೀ ಎ. ಜಿ. ಮೊಡ್ಡಮೇಟಿ.—ಈ ತೀರ್ಪು ಪೂರ್ತಿಯಾಗಿ ಎಂದು ಕಾರ್ಯಗತವಾಗುತ್ತದೆ ಎಂದು ನಿಶ್ಚಿತ ಹೇಳಲಿಕ್ಕೆ ಸಾಧ್ಯವೇ ?

ಶ್ರೀ ಡಿ. ದೇವರಾಜ್ ಅರಸ್.—ತೀರ್ಪುಕೊಟ್ಟ ಮೇಲೆ ಅದು ಗೆಜೆಟ್ಟಿನಲ್ಲಿ ಪಾಯಿಷ್ ಆಗಬೇಕು. ಆನಂತರ 30 ದಿವಸಗಳಾದಮೇಲೆ ಅದನ್ನು ಕಾರ್ಯಗತಮಾಡಬೇಕು. ಆದರೆ ಇಲ್ಲಿ ಸ್ವಲ್ಪ ಅಡಚಣೆಗಳಿವೆ. ಅವಾರ್ಡಿನಲ್ಲಿ ಕೊಟ್ಟಿರುವ ಪ್ರಕಾರ ಕಾರ್ಯಗತಮಾಡಲು ಆರ್ಥಿಕ ತೊಂದರೆಗಳಿರುವುದರಿಂದ ಸೂಪರಿಂಟೆಂಡಿಂಗ್ ಇಂಜಿನಿಯರು ನೇರವಾಗಿ ಇವನ್ನು ಕಾರ್ಯಗತಮಾಡಲು ಸಾಧ್ಯವಿಲ್ಲ. ಅವರು ಸರ್ಕಾರಕ್ಕೆ ಬರೆಯಬೇಕು. ಅದಕ್ಕೆ ಸರ್ಕಾರದಿಂದ ಮಂಜೂರಾತಿ ಹೋಗಬೇಕು. ಮಂಜೂರಾತಿ ಹೋಗಲು ಬಜೆಟ್ಟಿನಲ್ಲಿ ಅದಕ್ಕೆ ಬೇಕಾದ ಹಣಕ್ಕೆ ಪ್ರಾವಿಷನ್ ಬೇಕು. ಹೀಗೆ ಸ್ವಲ್ಪ ಅಡಚಣೆಗಳು ಆಗಿ ಸಂಬಂಧಪಟ್ಟ ಇಲಾಖೆಗೆ ಬರೆಮ ತಕ್ಷಣ ಯಾವ ಯಾವ ವಿಚಾರಗಳಲ್ಲಿ ಕಾರ್ಯಗತ ಮಾಡಬಹುದೋ ಅದನ್ನು ಮಾಡಿ ಎಂದು ಹೇಳಿದ್ದೇವೆ. ಇನ್ನು ಕೆಲವು ವಿಷಯಗಳಲ್ಲಿ ಯಾವರೀತಿ ಕಾರ್ಯಗತ ಮಾಡಬೇಕು ಎನ್ನುವುದರಲ್ಲಿ ಸ್ವಲ್ಪ ಅನುಮಾನವಿದೆ. ಅಗತ್ಯ ಬಿದ್ದರೆ ಕಾನೂನು ರೀತ್ಯ ಮತ್ತೆ ಲೇಬರ್ ಕೋರ್ಟಿಗೆ ಅಥವಾ ನ್ಯಾಷನಲ್ ಟ್ರಿಬ್ಯೂನಲ್‌ಗೆ ಹೋಗಿ ಅನುಮಾನ ಪರಿಚ್ಛೇದ ಮಾಡಿಕೊಂಡು ಅವಾರ್ಡನ್ನು ಜಾರಿಗೆ ತರಬೇಕಾಗಿದೆ. ಇದರಿಂದ ಸ್ವಲ್ಪ ನಿಧಾನವಾಗಿದೆ.

SRI S. RAJAGOPAL.—May I know the details of the award implemented so far and the demands not implemented so far ?

SRI D. DEVARAJ URS.—There are 13 demands like annual increments, leave facilities, making workcharged establishment permanent and pensionable, nature of work, maintenance of service books, retrenchment compensation, payment of T.A., D.A. and permissible joining time on transfer, medical facilities, etc. All these demands have been examined by the Department and some of them have been agreed to be implemented.

SRI G. V. GOWDA.—The award was published in July 1965 and as per the provision within 30 days the award has to be implemented except the demands involving financial implications. The other demands like providing medical facilities, making workcharged establishment permanent and pensionable, could have been implemented.

MR. SPEAKER.—Where finance is not involved there is no impediment for its implementation immediately.

SRI D. DEVARAJ URS.—That is why the Labour Department brought pressure on the P.W.D. to implement such of those demands of the award which could be easily implemented.

SRI SANJIVANATH AIKALA.—When the Government itself is the employer, will this inordinate delay not set a very bad example to the private employers ?

SRI D. DEVARAJ URS.—We do not allow this to be an example for others.

SRI C. J. MUCKANNAPPA.—What is the money involved in all these 13 demands in the award ?

SRI D. DEVARAJ URS.—It is not known. It has to be worked out.

SRI C. J. MUCKANNAPPA.—The Chair was pleased to observe that financial implications are there. The Hon'ble Minister himself did not know how much money is involved.

MR. SPEAKER.—It has to be calculated and it is has to be submitted and sanctioned.

SRI C. J. MUCKANNAPPA.—When the award is to be implemented should be not know what is the money involved ?

SRI D. DEVARAJ URS.—There is no need for me to know the amount involved. We are responsible to see that the award is implemented whatever be the amount involved.

ಶ್ರೀ ಎಸ್. ಗೋಪಾಲ ಗೌಡ.—ತಾವು ಲೇಬರ್ ಡಿಪಾರ್ಟ್‌ಮೆಂಟ್, ಪಿ.ಡಬ್ಲ್ಯು.ಡಿ. ಇಲಾಖೆಯ ಮೇಲೆ ಒತ್ತಾಯ ತಂದಿದ್ದಾರೆಂದು ಹೇಳುತ್ತೀರಿ. ಪಿ.ಡಬ್ಲ್ಯು.ಡಿ.ಗೆ ಯಾವಾಗ ಅವಾರ್ಡನ್ನು ತಿಳಿಸಿದ್ದೀರಿ ?

ಅಧ್ಯಕ್ಷರು.—ಹಣಕಾಸಿನ ಇಲಾಖೆ ಹಣ ಕೊಟ್ಟಾಗ ಲೋಕೋಪಯೋಗಿ ಇಲಾಖೆಯವರು ಕಾರ್ಯಗತ ಮಾಡುತ್ತಾರೆ.

ಶ್ರೀ ಗೋಪಾಲ ಗೌಡ.—ಅದು ಬೇರೆ ಮಾತು. Award is binding ಈ ಎಂಟು ತಿಂಗಳಿನಿಂದಲೂ ಏನೂ ಮಾಡದೆ ಸುಮ್ಮನೆ ಕುಳಿತಿದ್ದರು. ಆದ್ದರಿಂದ ಸರ್ಕಾರ ಆದಷ್ಟು ಬೇಗನೆ ಅವಾರ್ಡನ್ನು ಪೂರ್ತಿಯಾಗಿ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಕ್ರಮ ತೆಗೆದುಕೊಳ್ಳುತ್ತೇವೆಂದು ಕಡ್ಡಾಯವಾಗಿ ಭರವಸೆ ಕೊಡುತ್ತೇನೆ.

SRI S. M. KRISHNA.—It was said that the Department has been calculating the financial implications of this award. I am sure, the Hon'ble Minister would have immediate figures if at all they have calculated. My fear is, nothing has been done at the moment. As it happens in every other Department, the Labour Department shifts its responsibility to the Department of Public Works. After all, it is a decision handed down by the Industrial Tribunal which is less biding on the Public Works Department as on the Labour Department.

SRI D DEVARAJ URS.—The legal position is wellknown. The Labour Department is not expected to calculate the quantum of award. It is the concerned Department that calcualtes the award and acts. With regard to the query that I should be in a position of knowing the quantum of money involved, I must say we are not expected to calculate. It is the Department concerned that is to act. Here is an element of delay, I agree, but the alternative for the Department would be either to straightaway prosecute the department concerned or the defaulting department or to persuade them. I thought in the interest of labour itself instead of again making it an issue before the Industrial Court, it is better to see that they implement it as quickly as possible.

MR. SPEAKER.—All these supplementaries are inteded to emphasise the supreme need for early action.

ಶ್ರೀ ಎ. ಜಿ. ದೊಡ್ಡಮೇಟಿ.—ಸ್ವಾಮಿ, ಕೆಲಸಗಾರರು ಬೇಡಿದ ಡಿಮಾಂಡುಗಳ ಪೈಕಿ ಜಾರಿಗೆ ತರಲಿಕ್ಕೆ ಅತ್ಯಂತ ಕ್ಲಿಷ್ಟ ಯಾವುದು ? ಅಥವಾ ಕ್ಲಿಷ್ಟವಿಲ್ಲದ್ದನ್ನು ಬೇಗ ಜಾರಿಗೆ ತರುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಕೆಲವು ಸೆಕ್ಷನ್ ಜಾರಿಗೆ ತರಲಿಕ್ಕೆ ಇದೆ. ಅದನ್ನು ತರಿಸೋಣ. ಅದನ್ನು ಆದಷ್ಟು ಬೇಗ ಮುಗಿಸಲು ಒಂದು ಮೀಟಿಂಗ್ ಕರೆಸುವುದಕ್ಕೆ ಏರ್ಪಾಡು ಮಾಡಿದ್ದೇವೆ. ನಂತರ ಇಂಪ್ಲಿಮೆಂಟ್ ಮಾಡುತ್ತೇವೆ.

ಶ್ರೀ ಎ. ಜಿ. ದೊಡ್ಡಮೇಟಿ.—ಇದರಲ್ಲಿ ಎಷ್ಟು ಕಾರ್ಮಿಕರು ಸೇರಿದ್ದಾರೆ ?

MR. SPEAKER.—That information may be furnished to the Hon'ble Member.

SRI SANJEEVANATH AIKALA.—Will it not encourage the management of Hospet Sugar Company not to settle their dispute also and implement their award?

SRI D. DEVARAJ URS.—We will not allow the Sugar Company or any other Company to lie over the awards passed.

———